## ಗುರು ಉಪದೇಶ



ಕಳ್ಳನೊಬ್ಬನಿಗೆ ನ್ಯಾಯಾಧೀಶರು ಕೇಳಿದರು, 'ನಿನ್ನ ಗುರುಗಳ ಮನೆಗೇ ಕನ್ನ ಕೊರೆದು ಅವರ ಆಭರಣಗಳನ್ನು ದೋಚಿದೆಯಲ್ಲ, ನಿನಗೆ ಆತ್ಮಸಾಕ್ಷಿಯೇ ಇಲ್ಲವೆ?' 'ಇಲ್ಲ, ನನಗೆ ಹಾಗೆ ಮಾಡು ಎಂದು ಗುರೂಜಿಯೇ ಹೇಳಿದ್ದರು' ಎಂದ ಕಳ್ಳ. ನ್ಯಾಯಾಧೀಶರು ಅಚ್ಚರಿಯಿಂದ, 'ಏನು? ಅವರ ಮನೆಗೆ ಕನ್ನ ಕೊರೆಯಲು ಗುರೂಜಿ ನಿನಗೆ ಉಪದೇಶಿಸಿದರೆ?' ಎಂದು ಕೇಳಿದಾಗ ಕಳ್ಳ ಹೇಳಿದ, 'ಹೌದು, ನೀನು ಉಪಜೀವನಕ್ಕಾಗಿ ಯಾವ ಕೆಲಸ ಮಾಡುವುದಾದರೂ ಗುರುಗಳ ಮನೆಯಿಂದಲೇ ಆರಂಭಿಸು. ಅದರಿಂದ ನಿನಗೆ ಒಳ್ಳೆಯದಾಗುತ್ತದೆ ಎಂದು ಅವರು ನನಗೆ ಹೇಳಿದ್ದರು'.

**ಪ. ರಾಮಕೃಷ್ಣ ಶಾಸ್ತ್ರಿ**



## ಸೊನ್ನೆ

ಮಂಜನ ಅಂಕಪಟ್ಟಿ ನೋಡಿದ ಅವನಮ್ಮ, 'ಏನೋ ಮಂಜ, ಗಣಿತದಲ್ಲಿ ಸೊನ್ನೆ ತೆಗೆದುಕೊಂಡಿದ್ದೀಯಾ? ಯಾಕೆ ಒಂದು ಲೆಕ್ಕಾನೂ ಸರಿಯಾಗಿ ಮಾಡಲಿಲ್ವಾ? ಇದನ್ನು ನೋಡಿ ಬಹಳ ಬೇಜಾರು ಆಗ್ತಿದೆ...' ಎಂದಳು. ಮಂಜ ಅಮ್ಮನನ್ನು ಸಮಾಧಾನ ಮಾಡುತ್ತ, 'ಇದಕ್ಕೆ ನೀನು ಬೇಜಾರು ಮಾಡಿಕೊಳ್ಳುವ ಬದಲು ಹೆಮ್ಮೆ ಪಡಬೇಕು...' ಎಂದ. ಸಿಟ್ಟಾಗಿದ್ದ ಅಮ್ಮ, 'ಹಾಗಂದ್ರೆ?' ಎಂದು ಹುಬ್ಬುಗಂಟಿಕ್ಕಿದಳು. ಮಂಜನ ಉತ್ತರ ಸಿದ್ಧವಾಗಿತ್ತು: 'ಅಮ್ಮ, ಸೊನ್ನೆಯನ್ನು ಕಂಡುಹಿಡಿದ ಆರ್ಯಭಟನೇ ನಿನ್ನ ಮಗನಾಗಿ ಹುಟ್ಟಿದ್ದಾನೆಂದು ಹೆಮ್ಮೆ ಪಡಬೇಕು...'

**ಸುಮನಾ**